# ಮಲ್ಲಳ್ಳಿಯ ಮಳೆಯಲ್ಲಿ ನೀರ ನರ್ತನ

■ ಅಭಿಷೇಕ ಡಿ.ಪುಂಡಿತ್ತೂರು






ಸುತ್ತಲೂ ಎತ್ತರದ ಬೆಟ್ಟ. ಎಲ್ಲಿ ನೋಡಿದರಲ್ಲೂ ಕಾನನ! ಎರಡು ಬೆಟ್ಟಗಳ ತಳದಲ್ಲಿ ನೀರು ಪ್ರಪಾತಕ್ಕಿಳಿಯುವ ದೃಶ್ಯ. ಬಿಳಿಯ ಹಾಲ್ನೊರೆಯ ರಭಸ, ಹಂತ ಹಂತವಾಗಿ ಕೆಳಗಿಳಿಯುವ ಜಲಧಾರೆ. ಇಂತಹ ನಿಸರ್ಗದ ರಮ್ಯ ಪರಿಸರದ ನಡುವಿದೆ ಮಲ್ಲಳ್ಳಿ ಜಲಪಾತ.

ಕೊಡಗಿನ ಸೋಮವಾರಪೇಟೆ ಬಳಿ ಇರುವ ಬೆಟ್ಟದ ಹಳ್ಳಿ ಎಂಬ ಕುಗ್ರಾಮದಲ್ಲಿ ಇದನ್ನು ನೋಡಬಹುದು. ಮಡಿಕೇರಿಯಿಂದ ಈ ಜಲಧಾರೆಗೆ ಸುಮಾರು 60 ಕಿ.ಮೀ ದೂರ. ಈ ಮಾರ್ಗದಲ್ಲಿ ಶಾಂತಳ್ಳಿ, ಕುಂದಳ್ಳಿ, ಹಂಚಿನಳ್ಳಿ ಸಿಗುತ್ತದೆ. ಇಲ್ಲಿ ಎಡಕ್ಕೆ ತಿರುಗಿ 4 ಕಿ.ಮೀ ಗುಂಡಿ ಬಿದ್ದ ರಸ್ತೆಯಲ್ಲಿ ಕ್ರಮಿಸಿದರೆ ಮಲ್ಲಳ್ಳಿ ಜಲಪಾತದ ಸೊಬಗು ನಮ್ಮ ಕಣ್ಣೆದುರು!

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕುಮಾರ ಪರ್ವತದ ಮತ್ತೊಂದು ಭಾಗವೇ ಪುಷ್ಪಗಿರಿ. ಪುಷ್ಪಗಿರಿಯ ತಪ್ಪಲಲ್ಲಿ ಉಗಮಿಸುವ ಕುಮಾರಧಾರ ನದಿಯು ಮಳೆಗಾಲದಲ್ಲಿ ಮೈದುಂಬಿ ಹರಿದು ಮಲ್ಲಳ್ಳಿ ಎಂಬಲ್ಲಿ ಜಲಪಾತ ಸೃಷ್ಟಿಸಿದೆ. ಮೊದಲ ಹಂತದಲ್ಲಿ ಸುಮಾರು 200 ಅಡಿ ಎತ್ತರದಿಂದ ಕೆಳಕ್ಕೆ ಧುಮುಕಿ, ನಂತರ ಮತ್ತೆ 90 ಅಡಿ ಎತ್ತರದಿಂದ ಕೆಳಕ್ಕೆ ಬೀಳುತ್ತದೆ. ಹೀಗೆ ಹಂತ ಹಂತವಾಗಿ ಒಟ್ಟಾಗಿ ಸುಮಾರು 390 ಅಡಿ ಎತ್ತರದಿಂದ ನೀರು ಬೀಳುವ ಸದ್ದು ಪ್ರವಾಸಿಗರನ್ನು ತುದಿಗಾಲಲ್ಲಿ ನಿಲ್ಲಿಸುತ್ತದೆ. ಇದೇ ನದಿ ಮುಂದೆ ಹರಿದು ಕುಕ್ಕೆ ಸುಬ್ರಹ್ಮಣ್ಯ ದೇವಾಯದ ಸ್ನಾನಘಟ್ಟವನ್ನು ತಲುಪುತ್ತದೆ. ಬಿಸಿಲೆ ಘಾಟಿಯಾಗಿ ಕೂಡ ಜಲಪಾತ ತಲುಪಲು ಸಾಧ್ಯ. ದಟ್ಟ ಕಾಡು ಮತ್ತು ಕಿರಿದಾದ ಹದಗೆಟ್ಟ ರಸ್ತೆಯೊಂದಿಗೆ ಕಾಡುಪ್ರಾಣಿಗಳ ಹಾವಳಿ ಈ ಘಾಟಿಯಲ್ಲಿ ಅಧಿಕ.

(8ನೇ ಪುಟ ನೋಡಿ)